**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಪಿ ಸಿ ಆರ್ 199/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಮಂತ್ರಿ ಪಾಲಯ್ಯ | ಪಿ.ಡಬ್ಲ್ಯೂ – 1 |
| ತಂದೆ ಹೆಸರು | : | ಬೊಮ್ಮಯ್ಯ | |
| ವಯಸ್ಸು | : | 70 ವರ್ಷ | |
| ಉದ್ಯೋಗ | : | -- | |
| ವಾಸಸ್ಥಳ | : | ನೆಲಗೇತನಹಟ್ಟಿ | ದಿಃ 14.08.2026 |

**ಸತ್ಯಾಪನ ಹೇಳಿಕೆಃ ನ್ಯಾಯಾಲಯದಿಂದಃ**

ಪೂಜಾರಿ ಪಾಲಯ್ಯ, ಬೊಮ್ಮಯ್ಯ, ಕುರಿ ಪಾಲಯ್ಯ ರವರ ವಿರುದ್ಧ ಈ ದೂರು ದಾಖಲಿಸಿರುತ್ತೇನೆ. ನಮ್ಮನ್ನು ಬಿಟ್ಟು ದೇವರು ಮಾಡಬಾರದು ಎಂದು ಈ ದೂರನ್ನು ನೀಡಿರುತ್ತೇನೆ. ನಾನು ಠಾಣೆಗೆ ಹೋಗಿದ್ದು, ಠಾಣೆಯಲ್ಲಿ ಏನು ಗಲಾಟೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ದೇವಸ್ಥಾನದ ಮುಂಬಾಗ ವಿಚಾರಣೆ ಮಾಡಲು ಪೊಲೀಸರು ಬಂದಿದ್ದರು. ಪೊಲೀಸರು ಏನು ಗಲಾಟೆ ನಡೆದಿರುವುದಿಲ್ಲ ಮುಂದೆ ಗಲಾಟೆ ನಡೆದರೆ ಕೇಸು ಕೊಡುವುದಾಗಿ ಹೇಳಿದ್ದರು. ಪಾಲಯ್ಯ ಮತ್ತು ಯರ್ರಪ್ಪ ರವರು ವಿಚಾರಣೆಯ ಸ್ಥಳದ ಹತ್ತಿರ ಬಂದಿದ್ದರು.

ಈಗ್ಗೆ 2 ವರ್ಷಗಳ ಹಿಂದೆ ದೇವರನ್ನು ಮಾಡುವ ಸಮಯದಲ್ಲಿ 3 ನೇ ಆರೋಪಿಯು ನನ್ನನ್ನು ನೂಕಿದ್ದರಿಂದ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ನೂಕಿದ ನಂತರ ನಾನು ನನ್ನಿವಾಳಕ್ಕೆ ಬಂದಿದ್ದು, ಪಾಲಯ್ಯ ಮತ್ತು ಯರ್ರಪ್ಪ ರವರು ಅವರ ಊರಿಗೆ ಹೋಗಿರುತ್ತಾರೆ. ನಾನು ನನ್ನಿವಾಳದಿಂದ ನಮ್ಮ ಊರಿಗೆ ಹೋಗಿರುತ್ತೇನೆ. ನಂತರ ವಕೀಲರ ಬಳಿ ಬಂದು ಕೇಸು ನೀಡಿರುತ್ತೇನೆ. ದೇವರನ್ನು ಮುಟ್ಟಲು ಕೊಡದೇ ನಮಗೆ ಅನ್ಯಾಯ ಮಾಡಿದ್ದರಿಂದ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ.

ಚಳ್ಳಕೆರೆ ಪೊಲೀಸ್ ಠಾಣೆಯವರು ನೀಡಿರುವ ಸ್ವೀಕೃತಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.1 ಅಂತ ಗುರುತಿಸಲಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ತಹಸೀಲ್ದಾರ್ ರವರಿಗೆ ನೀಡಿರುವ ಮನವಿ ಪತ್ರಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 3 ಅಂತ ಗುರುತಿಸಲಾಯಿತು.

ದೇವಸ್ಥಾನದ ಕಳಶ ಪ್ರತಿಷ್ಠಾಪನೆಯ ಬಿತ್ತಿ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.4 ಅಂತ ಗುರುತಿಸಲಾಯಿತು.

ಇದೇ ನ್ಯಾಯಾಲಯದ ಓ ಎಸ್ 35/2010 ರ ತೀರ್ಪು ಮತ್ತು ಡಿಕ್ರಿಯ ದೃಡೀಕೃತ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ.5 ಮತ್ತು 6 ಅಂತ ಗುರುತಿಸಲಾಯಿತು.

ಇದೇ ನ್ಯಾಯಾಲಯದ ಓ ಎಸ್ 219/2022 ರ ಆದೇಶ ಪತ್ರ , ಮೆಮೋ, ವಾದ ಪತ್ರದ ದೃಡೀಕೃತ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ.7 ರಿಂದ 9 ಅಂತ ಗುರುತಿಸಲಾಯಿತು.

ಪತ್ರಿಕಾ ಪ್ರಕಟಣೆಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.10 ಅಂತ ಗುರುತಿಸಲಾಯಿತು.

ಹತ್ತು ಭಾವಚಿತ್ರಗಳನ್ನು ಹಾಜರು ಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ.11 ರಿಂದ 20 ಅಂತ ಗುರುತಿಸಲಾಯಿತು.

ಸಿಡಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.21 ಅಂತ, ಸಿಡಿಗೆ ಲಗತ್ತಾಗಿರುವ ಬಿಲ್ ರಸೀದಿಯನ್ನು ನಿಪಿ.21(ಎ) ಅಂತ ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ